ಶ್ರೀ ಬಿ. ಶಿವರಾಮು : ನಿಮಗೆ ಮಾತನಾಡಲು ಅವಕಾಶವಿದೆ. ಆದ್ದರಿಂದ, ಮಾತನಾಡಿ ಏನಾದರೊಂದು ನೀತಿಯನ್ನು ರೂಪಿಸತಕ್ಕಂಥ ವ್ಯವಸ್ಥೆಯಾಗಬೇಕು. 53.373 ರೈತ ಕುಟುಂಬದವರು ಈ ಹಣ ಬರುತ್ತದೆ, ಬರುತ್ತದೆ ಎನ್ನವ ನಿರೀಕ್ಷೆಯಲ್ಲಿಯೇ ಇದ್ದಾರೆ. ಮತ್ತೆ ಈಗಾಗಲೇ ಆಲೂಗೆಡ್ಡೆ ಬಿತ್ತನೆ ಕಾಲ ಪ್ರಾರಂಭವಾಗಿದೆ. ಇನ್ನೂ ಅವರಿಗೆ ಹಣ ಸಿಗುವುದಿಲ್ಲವೆಂದರೆ ಹೇಗೆ? ನಮ್ಮ ಜಿಲ್ಲೆಯಿಂದ ಸುಮಾರು ಹನ್ನೊಂದೂವರೆ ಕೋಟಿ ರೂಪಾಯಿಗಳ ರೈತರ ಹಣ ಸರ್ಕಾರದಲ್ಲಿ ಇರುವಾಗ, ಅವರ ಆತಂಕವನ್ನು ನಾವು ಅರ್ಥಮಾಡಿಕೊಂಡು, ಅದಕ್ಕೆ ಸ್ಪಂದಿಸತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ ತಮ್ಮ ಕಾಲದಲ್ಲಾದರೂ ಒಂದು ಟೈಂ ಬೌಂಡ್ ಪ್ರೋಗ್ರಾಂಅನ್ನು ನಿಗದಿ ಮಾಡುವುದರ ಮುಖಾಂತರ ರೈತರ ಆತಂಕವನ್ನು ಬಗೆಹರಿಸಬೇಕು ಎಂದು ಅಧ್ಯಕ್ಷರ ಮೂಲಕ ತಮಗೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದುದ್ದರಲ್ಲಿ ಬಹಳ ಅರ್ಥವಿದೆ. ಆದರ ಬಗ್ಗೆ ಪರಿಶೀಲನೆಯನ್ನು ಮಾಡಿ ಮುಂದಿನ ದಿನಗಳಲ್ಲಿ ಕ್ರಮವನ್ನು ಕೈಗೊಳ್ಳುತ್ತೇವೆ.

ತುರುವೇಕೆರೆ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಗೋದಾಮುಗಳನ್ನು ನಿರ್ಮಿಸುವುದು

52 (37) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಕೃಷಿ ಮಾರುಕಟ್ಟೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮುಗಳು ಇಲ್ಲದೇ ರೈತರು ಬೆಳೆದ ಉತ್ಪನ್ನಗಳನ್ನು ಸಂರಕ್ಷಿಸಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮುಗಳನ್ನು ನಿರ್ಮಾಣ ಮಾಡಿ ರೈತರ ಉತ್ಪನ್ನಗಳನ್ನು ಸಂರಕ್ಷಿಸಲು ಅನುಕೂಲ ಮಾಡಿಕೊಡಲಾಗುವುದೇ;

ಇ. ಹಾಗಿದ್ದಲ್ಲಿ ಯಾವಾಗ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪೂರ (ಕೃಷಿ ಮಾರುಕಟ್ಟೆ ಸಚಿವರು):

ಅ. ಇಲ್ಲ.

ಆ. – ಪ್ರಶ್ನೆ ಉದ್ಭವಿಸುವಿದಿಲ್ಲ –

ಇ. – ಪ್ರಶ್ನೆ ಉದ್ಭವಿಸುವಿದಿಲ್ಲ –

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೋಕಿನಲ್ಲಿ ಒಂದು ಗೋದಾಮನ್ನು ನಿರ್ಮಾಣ ಮಾಡಬೇಕು ಎಂದು ಹಿಂದೆ ಬಹಳ ಸಾರಿ ನಾನು ಸರ್ಕಾರವನ್ನು ಒತ್ತಾಯ ಮಾಡಿದ್ದೇನೆ. ಅದಕ್ಕೆ ಪೂರಕವಾಗಿ ಜಮೀನು ಕೊಡಬೇಕು ಎಂದು ನಾವು ಆರ್.ಎಂ.ಸಿ.ಗೆ.

ಕೇಳಿದ್ದೇವೆ. ಬಹಳ ಮುಖ್ಯವಾಗಿ, ನಮ್ಮಲ್ಲಿ ಬೆಳೆಯತಕ್ಕಂಥ ರಾಗಿ, ಭತ್ತ ಇತ್ಯಾದಿಗಳನ್ನು ಸ್ಟಾಕ್ ಇಡಲು ಬಹಳ ತೊಂದರೆಯಾಗಿದೆ. ಇವತ್ತಿನ ದಿವಸ ಅವುಗಳನ್ನು ಬೇರೆಬೇರೆ ಪ್ರೈವೇಟ್ ಗೋದಾಮಿನಲ್ಲಿಟ್ಟು, ಅದು ವೇಸ್ಟ್ ಆಗುತ್ತಿದೆ. ಅದಕ್ಕಾಗಿ, ತುರುವೇಕೆರೆಯಲ್ಲಿ ಒಂದು ಗೋದಾಮು ನಿರ್ಮಾಣ ಮಾಡುವುದರ ಮುಖಾಂತರ ಬೆಳೆಗಳನ್ನು ಸಂರಕ್ಷಣೆ ಮಾಡುವ ಅವಶ್ಯಕತೆಯಿದೆ. ಅದಕ್ಕೆ ಅಗತ್ಯವಾಗಿರುವ ಜಮೀನನ್ನು ಕೊಟ್ಟು, ಒಂದು ಗೋದಾಮನ್ನು ನಿರ್ಮಾಣ ಮಾಡಬೇಕು ಎನ್ನುವುದು ನನ್ನ ಬೇಡಿಕೆಯಾಗಿದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಅಧ್ಯಕ್ಷರೆ ತುರುವೇಕೆರೆ ತಾಲ್ಲೂಕಿನಲ್ಲಿ ರಾಗಿ, ಇತ್ಯಾದಿಗಳನ್ನು ಇಡಲು ಈಗಾಗಲೇ ಫುಡ್ ಅಂಡ್ ಸಿವಿಲ್ ಸಪ್ಲೈ ಡಿಪಾರ್ಟ್‌ಮೆಂಟ್‌ನವರಿಗೆ ಒಂದು ಗೋದಾಮು ಕೂಡ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಆರ್.ಎಂ.ಸಿ. ಮುಖಾಂತರ ಒಂದು ಗೋದಾಮಿಗೆ ಜಾಗ ಕೊಡಲು ಕೇಳಿದ್ದೇವೆ ಎಂದು ಹೇಳಿದರು. ಆ ಪ್ರಸ್ತಾವನೆ ನಮ್ಮ ಹತ್ತಿರ ಬಂದಿಲ್ಲ. ಆ ಪ್ರಸ್ತಾವನೆಯನ್ನು ಅಲ್ಲಿರತಕ್ಕಂಥ ಸಂಬಂಧಪಟ್ಟವರಿಗೆ ಕೊಡಲಿ. ಕೊಟ್ಟರೆ ವೇರ್‌ಹೌಸ್‌ಗೆ ಜಾಗ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಲು ಬಯಸುತ್ತೇನೆ.

ಶ್ರೀ ಎಂ. ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ ಈಗಾಗಲೇ ನಾವು ಸುಮಾರು ಎರಡು ವರ್ಷಗಳಿಂದ ನಿರಂತರವಾಗಿ ಪತ್ರ ಬರೆದಿದ್ದೇವೆ. ಈ ಬಗ್ಗೆ ನಾನು ಸಂಬಂಧಪಟ್ಟ ನಿರ್ದೇಶಕರನ್ನೂ ಭೇಟಿಯಾಗಿದ್ದೇನೆ. ಈಗಾಗಲೇ ನಮ್ಮ ಆರ್.ಎಂ.ಸಿ. ಯಲ್ಲಿ ಒಂದು ಠರಾವನ್ನೂ ಸಹಾ ಮಾಡಿದ್ದಾರೆ. ಜಾಗವನ್ನು ಕೊಡಬೇಕು. ಜಾಗವನ್ನು ಪ್ರಿಸರ್ವ್ ಮಾಡಬೇಕೆಂದು ಠರಾವನ್ನು ಮಾಡಿದ್ದಾರೆ. ಆದರೆ ಸಂಬಂಧಪಟ್ಟ ಇಲಾಖೆಯ ಮತಿಯಿಂದ ಸರ್ಕಾರೀ ಆದೇಶ ಹೊರಬಂದಿಲ್ಲ. ಒಂದು ಗೋದಾಮನ್ನು ಕೊಡಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವರು ಹೇಳುತ್ತಿದ್ದಾರೆ. ಅಲ್ಲಿ ನಮಗೆ ಯಾವುದೇ ಗೋದಾಮವನ್ನು ಕೊಟ್ಟಿಲ್ಲ. ಪ್ರೈವೇಟ್‌ನಲ್ಲಿ ಬಾಡಿಗೆಗೆ ತೆಗೆದುಕೊಂಡಿದ್ದಾರೆ. ಮತ್ತೊಂದು ವೈಶಿಷ್ಟ್ಯವೆಂದರೆ, ಟೀಚರ್ಸ್ ಕಟ್ಟಿರತಕ್ಕಂಥ ಒಂದು ಅಸೋಸಿಯೇಷನ್‌ನಿನಲ್ಲಿ ಬಿಲ್ಡಿಂಗನ್ನು ತೆಗೆದುಕೊಂಡಿದ್ದಾರೆ. ಆ ರೀತಿಯಾಗಬಾರದು. ಆರ್.ಎಂ.ಸಿ. ಯಾರ್ಡ್‌ನಲ್ಲಿ ಒಂದು ಸಪರೇಟ್ ಗೋದಾಮನ್ನು ಕಟ್ಟಿದರೆ ಅನುಕೂಲವಾಗುತ್ತದೆ. ಆಗ ರೈತರು ತಂದಂಥ ರಾಗಿ, ಭತ್ತವನ್ನು ಇಲ್ಲಿ ಇಡಲು ಅನುಕೂಲವಾಗುತ್ತದೆ. ಈಗ ಅದನ್ನು ಪ್ರೈಮರಿ ಸ್ಕೂಲ್ ಟೀಚರ್ಸ್ ಅಸೋಸೊಯೇಷನ್ನಿನ ಗುರುಭವನದಲ್ಲಿ ಸ್ಟಾಕ್ ಮಾಡುತ್ತಿದಾರೆ. ಇದು ಬಹಳ ವಿಪರ್ಯಾಸವಾಗಿದೆ. ಏಕೆಂದರೆ, ಅಲ್ಲಿ ಅದಕ್ಕೆ ಸೆಕ್ಯುರಿಟಿ ಇಲ್ಲ. ಆದ್ದರಿಂದ, ಅಲ್ಲಿ ಒಂದು ಉತ್ತಮವಾದ ಗೋದಾಮನ್ನು ನಿರ್ಮಾಣ ಮಾಡಿ ಅಲ್ಲಿ ಪ್ರಿಸರ್ವ್ ಮಾಡಲಿಕ್ಕೆ ಸರ್ಕಾರ ಮುಂದಾಗಬೆಕು ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ" : ಮಾನ್ಯ ಅಧ್ಯಕ್ಷರೆ, ತುರುವೇಕೆರೆಯಲ್ಲಿ ರೈತರು ಬೆಳೆಯತಕ್ಕಂಥ ದವಸಧಾನ್ಯಗಳಿಗೆ ಗೋದಾಮುಗಳ ಶಾರ್ಟೇಜ್ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದೂ ಕೂಡ ಅವರು ಹೇಳಿದ್ದಾರೆ. ನಮ್ಮ ವ್ಯಾಪ್ತಿಯಲ್ಲಿ ಏನು ಬರುತ್ತದೆ, ಅದನ್ನು ಆದಷ್ಟು ಬೇಗ ಇತ್ಯರ್ಥ ಮಾಡಿ ಅವರಿಗೆ ಅನುಕೂಲ ಮಾಡಿಕೊಡುವಂಥ ಕೆಲಸ ಮಾಡುತ್ತೇವೆ ಎಂದು ನಾನು ತಮ್ಮ ಮೂಲಕ ಅವರಿಗೆ ಹೇಳುತ್ತೇನೆ.

ಒಳನಾಡು ಮೀನುಗಾರರಿಗೆ ಆಗುತ್ತಿರುವ ತಾರತಮ್ಯ

53 (245) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಒಳನಾಡು ಮೀನುಗಾರರಿಗೆ ಸವಲತ್ತು ನೀಡುವಲ್ಲಿ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕರಾವಳಿ ಮೀನುಗಾರರಿಗಿಂತ ಮೂರು ಪಟ್ಟು ಜಾಸ್ತಿ ಇರುವ ಒಳನಾಡು ಮೀನುಗಾರರಿಗೆ ಕಳೆದ 3 ವರ್ಷಗಳಲ್ಲಿ ಸರ್ಕಾರ ಯಾವ ಯಾವ ರೀತಿಯ ಸೌಲಭ್ಯ ನೀಡಿದೆ (ಸಂಪೂರ್ಣ ವಿವರ ನೀಡುವುದು);

ಇ) ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು):

ಅ) ಒಳನಾಡು ಮೀನುಗಾರರಿಗೆ ಸವಲತ್ತು ನೀಡುವಲ್ಲಿ ಯಾವುದೇ ತಾರತಮ್ಯವಾಗುತ್ತಿಲ್ಲ. ಒಳನಾಡು ಮೀನುಗಾರರ ಹಾಗೂ ಕರಾವಳಿ ಮೀನುಗಾರರ ಅಗತ್ಯತೆಗಳು ಬೇರೆ ಬೇರೆಯಾಗಿರುತ್ತವೆ. ಆದ್ದರಿಂದ ಒಳನಾಡು ಮೀನುಗಾರರ ಅಗತ್ಯತೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತದೆ.

ಆ) ಒಳನಾಡು ಮೀನುಗಾರರಿಗೆ 3 ವರ್ಷಗಳಿಂದ ಈ ಕೆಳಕಂಡ ಯೋಜನೆಗಳಡಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

1. ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು. ಗುತ್ತಿಗೆ ಪಡೆಯಲು ಬೇಡಿಕೆ ಇಲ್ಲದ ಜಲಸಂಪನ್ಮೂಲಗಳನ್ನು ಟೆಂಡರ್–ಕಂ– ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸುವುದು.

2. ಒಳನಾಡು ಮೀನುಗಾರಿಕೆ ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ.

3. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ.

4. ಮೀನುಮರಿ ಉತ್ಪಾದನೆ ಪಾಲನೆ ಮತ್ತು ಹರಿಚಿಕೆ

5. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆ ಅಭಿವ್ರದ್ಧಿ ಕಾರ್ಯಕ್ರಮ.

6. "ಮತ್ಸ್ಯಾಶ್ರಯ" ಯೋಜನೆಯಡಿ ವಸತಿ ಸೌಲಭ್ಯ.

7. ಮೀನು ಮಾರಾಟಕ್ಕಾಗಿ ಮತ್ತು ಮತ್ಸ್ಯವಾಹಿನಿಗೆ ಸಹಾಯ ಯೋಜನೆಯಡಿ ಸಹಾಯಧನ ಒದಗಿಸಲಾಗುತ್ತಿದೆ.